ಸಿಡ್ನಿ ಕನ್ನಡ ಸಂಘ

# ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆ

"ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು"

--ಕನ್ನಡದ ರಾಷ್ಟ್ರಕವಿ ಕುವೆಂಪು.

ಸಿಡ್ನಿ ಕನ್ನಡ ಸಂಘದ ಆಶ್ರಯದಲ್ಲಿ ೬೦ನೇ ಕರ್ನಾಟಕ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ಶನಿವಾರ, ನವೆಂಬರ್ ೧೨, ೨೦೧೬ರಂದು ಜಂಟಿಯಾಗಿ ವಿಜೃಂಭಣೆಯಿಂದ ಆಚರಿಸಲಾಯಿತು. ಈ ವರ್ಷವು ಸಿಡ್ನಿ ಕನ್ನಡ ಸಂಘದ ೩೫ನೇ ವಾರ್ಷಿಕೋತ್ಸವ ವರ್ಷವಾಗಿರುವದು ಮತ್ತೊಂದು ವಿಶೇಷ. ಸಿಡ್ನಿಯ ಡಂಡಾಸ್ ಸಮುದಾಯ ಭವನದಲ್ಲಿ ಜರುಗಿದ ಈ ಸಮಾರಂಭದಲ್ಲಿ ಸ್ಥಳೀಯ ಗಣ್ಯರುಗಳು ಭಾಗವಹಿಸಿದ್ದರು.ಪ್ರಾರಂಭದಲ್ಲಿ ಕನ್ನಡ ನಾಡ ಗೀತೆ "ಜಯ ಭಾರತ ಜನನಿಯ ತನುಜಾತೆ" ಗೀತೆಯನ್ನು ಶ್ರೀಮತಿ. ಶುಭಶ್ರಿ ಹಾಡಿದರು.



ಬ್ಲ್ಯಾಕ್ ಟೌನ್ ನಗರ ಸಭೆಯ ಸದಸ್ಯರಾದ ಡಾ. ಮೋಣಿಂದರ್ ಸಿಂಘ್, ಸಂಘದ ಅಧ್ಯಕ್ಷರಾದ ಶ್ರೀ. ಓಂಕಾರಸ್ವಾಮಿ ಗೊಪ್ಪೇನಹಳ್ಳಿ, ಕನ್ನಡ ಸಮುದಾಯದ ಹಿರಿಯರು ಮತ್ತು "ಸಿಡ್ನಿ ಕನ್ನಡ ವಾಣಿ" ಬಾನುಲಿ ಕಾರ್ಯಕ್ರಮದ ಸಂಚಾಲಕರೂ ಆದ ಶ್ರೀ. ರಾಜ್ ನಟರಾಜನ್, ಸಂಘದ ಉಪಾಧ್ಯಕ್ಷೆ ಶ್ರೀಮತಿ. ಶಾರದಾ ಕಾರ್ತಿಕ್ ಹಾಗೂ ಸಂಘದ ಕಾರ್ಯದರ್ಶಿ ಶ್ರೀ.





ವಿಜಯಕುಮಾರ ಹಲಗಲಿ ಅವರುಗಳು ಸಾಂಪ್ರದಾಯಕ ದೀಪವನ್ನು ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಮತಿ ಗಾಯತ್ರಿದೇವಿನೃತ್ಯ ನಿರ್ದೇಶನದಲ್ಲಿ ಚಿಕ್ಕ ಮಕ್ಕಳು ತಮ್ಮ ಮನಮೋಹಕ ನೃತ್ಯದ ಮೂಲಕ "ಮೂಷಿಕ ವಾಹನ ಮೋದಕ ಹಸ್ತ" ಗೀತೆಯನ್ನು ಪ್ರಸ್ತುತ ಪಡಿಸಿ ವಿಘ್ನ ನಿವಾರಕ ಗಣೇಶನಿಗೆ ಪ್ರಾರ್ಥನೆ ಸಲ್ಲಿಸಿದರು. ಭಾಗವಹಿಸಿದ ಮಕ್ಕಳು ಆರಾಧ್ಯ ಸುಂಕಾರಿ, ಮಧುರ್ ಪ್ರಸಾದ್ ಚಲಸಾನಿ, ತಾನಿಶ್ ರಾಘವ್ ಕಿಶೋರ್ ತಮ್ಮ ಮುದ್ದು ಪ್ರದರ್ಶನಕ್ಕೆ ಸಭಿಕರ ಮೆಚ್ಚುಗೆ ಪಡೆದರು.





"ತಾಯಿ ಶಾರದೆ" ಭಕ್ತಿ ಗೀತೆಯನ್ನು ನಮಿತಾ ಗೌಡ, ಆರವ್ ಹರ್ಷ, ಸಂಪ್ರಿಥ ವಿನೋದ್, ಯೋಷಿಕ ಅರುಣ್, ಅನಿಕಾ ಶಂಕರ್ ಮತ್ತು ನಂದಿನಿ ಅವೋದ್ ಅವರುಗಳು ನೃತ್ಯದ ಮೂಲಕ ಸುಂದರವಾಗಿ ಪ್ರದರ್ಶಿಸಿದರು.




ಮಕ್ಕಳು ಅಭಿನಯಿಸಿದ ಹಾಸ್ಯ ಪ್ರಧಾನ "ಗುರು ಶಿಷ್ಯರು" ಕನ್ನಡ ಚಲನ ಚಿತ್ರದ ಹಾಸ್ಯ ಪ್ರಸಂಗವು ಎಲ್ಲರ ಮನಸೆಳೆಯಿತು. ಚಿತ್ರದ "ಗುರು ಪೂರ್ಣಾನಂದಯ್ಯ ಮತ್ತು ಅವರ ೭ ಜನ ಪೆದ್ದ ಶಿಷ್ಯರ" ಸನ್ನಿವೇಶವು ಸಭಿಕರನ್ನು ನಗೆಗಡಲಿನಲ್ಲಿ ತೇಲಿಸುವಲ್ಲಿ ಸಫಲವಾಯಿತು. ಈ ಕಿರುನಾಟಕದ ನಿರ್ದೇಶನ ರಮೇಶ್ ಬಿ. ಕೆ. ಅವರದು. ಭಾಗವಹಿಸಿದ ಪ್ರತೀಕ್ಷಾ ನವೀನ್, ಚಿನ್ಮಯ್ ದೀಕ್ಷಿತ್, ಪ್ರಣವ್ ಮೂರ್ತಿ, ತಾಲಿನ್ ನಾಗರಾಳೆ, ಆರ್ಯನ್ ವಲವೇಮಠ, ಅಮೂಲ್ಯ ಶೆಲ್ಲಿಕೇರಿ ಮತ್ತು ಅನೂಷ್ಕಾ ಅಜಯ್ ರಾವ್ ಅವರು ನೆರೆದ ಜನರಿಂದ ಚಪ್ಪಾಳೆ ಗಿಟ್ಟಿಸಿದರು.



ಶ್ರೀ. ಓಂಕಾರಸ್ವಾಮಿ ಗೊಪ್ಪೇನಹಳ್ಳಿ

ಸಿಡ್ನಿ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ. ಓಂಕಾರಸ್ವಾಮಿ ಗೊಪ್ಪೆನಹಳ್ಳಿ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕನ್ನಡ ಸಂಘ ಬೆಳೆದು ಬಂದ ದಾರಿಯನ್ನು ನೆನಪಿಸಿಕೊಂಡು ಮುಂಬರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಮುಂಬರುವ ವರ್ಷವು ಸಿಡ್ನಿ ಕನ್ನಡ ಸಂಘದ ೪೫ನೇ ವಾರ್ಷಿಕೋತ್ಸವವಾಗಿದ್ದು ಸಂಘವು ವಿಜೃಂಭಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ ಎಂದು ಹೇಳಿದರು. ೨೦೧೭ರ ಆಗಸ್ಟ್ ೫ರಂದು ಜರುಗುವ ವಾರ್ಷಿಕೋತ್ಸವ ಸಮಾರಂಭಕ್ಕೆ ಸಿಡ್ನಿಯ ಕನ್ನಡಾಭಿಮಾನಿಗಳೆಲ್ಲರೂ ಎಲ್ಲ ರೀತಿಯ ಸಲಹೆ, ಸಹಾಯ ಮತ್ತು ಸಹಕಾರ ನೀಡಿ ಸಕ್ರೀಯವಾಗಿ ಭಾಗವಹಿಸಬೇಕೆಂದು ವಿನಂತಿಸಿಕೊಂಡರು. ಕನ್ನಡ ಸಂಘದ ಹುಟ್ಟು ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿ ಯಶಸ್ವಿಗೊಳಿಸಲು ಕೈಗೂಡಿಸಬೇಕೆಂದು ಆಶಯ ವ್ಯಕ್ತಪಡಿಸಿದರು.




ಆತಿಥಿಯಾಗಿ ಭಾಗವಹಿಸಿದ ಬ್ಲ್ಯಾಕ್ ಟೌನ್ ನಗರಸಭೆಯ ನೂತನ ಸದಸ್ಯರಾದ ಡಾ. ಮೋಣಿಂದರ್ ಸಿಂಘ್ ಅವರು ಮಾತನಾಡಿ ಚಿಕ್ಕ ಮಕ್ಕಳು ಭಾರತೀಯ ವೇಷ ಭೂಷಣಗಳನ್ನು ಧರಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದನ್ನು ಮೆಚ್ಚಿ ಪ್ರಶಂಶಿದರು. ಭಾರತದ ಕಲೆ ಮತ್ತು ಪರಂಪರೆಯನ್ನು ಪ್ರದರ್ಶಿಸಿ ಆಸ್ಟ್ರೇಲಿಯಾದ ಬಹು ಸಂಸ್ಕೃತಿ ಸಮಾಜವನ್ನು ಮತ್ತಷ್ಟು ಶ್ರೀಮಂತಗೊಳಿಸುವತ್ತ ಸಿಡ್ನಿ ಕನ್ನಡ ಸಂಘದ ಮಾಡುತ್ತಿರುವ ಕಾರ್ಯವನ್ನು ಶ್ಲ್ಯಾಘಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಲು ತಮ್ಮನ್ನು ಆಹ್ವಾನಿಸಿ ಅವಕಾಶ ನೀಡಿದ್ದಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತ ಕನ್ನಡ ಸಂಘ ಮತ್ತು ಕನ್ನಡಿಗರನ್ನು ಅಭಿನಂದಿಸಿದರು.



"ಕನ್ನಡದ ಕೂಸುಗಳು" ಮಕ್ಕಳ ತಂಡವು ಕನ್ನಡ ಜಾನಪದ ಗೀತೆ ಮತ್ತು ಚಲನಚಿತ್ರಗಳ ಹಾಡುಗಳನ್ನೊಳಗೊಂಡ ಗೀತಮಾಲಿಕೆಯೊಂದನ್ನು ಪ್ರದರ್ಶಿಸಿ ಸಭಿಕರಿಂದ ಶಿಳ್ಳೆ ಮತ್ತು ಚಪ್ಪಾಳೆಗಳ ಮೆಚ್ಚುಗೆ ಪಡೆಯಿತು. ಈ ನೃತ್ಯದ ಸಂಯೋಜನೆ ವಿದ್ಯಾ ಆರಸ್ ಮತ್ತು ಶ್ರೀಮತಿ. ಸ್ಮೃತಿ ರಾವ್ ಅವರದು. ಈ ನೃತ್ಯದಲ್ಲಿ ಭಾಗವಹಿಸಿದ ಮಕ್ಕಳು ಅನಿಷಾ ಶೇಷನ್, ದಿಯಾ ಮೂರ್ತಿ, ದಿಯಾ ಅರಸ್, ಇಶಾ ರಾವ್, ಇಶಾ ಮೂರ್ತಿ, ಸಮಾನ ಕಶ್ಯಪ್, ವಿಭಾ ರವಿ, ಸೃಷ್ಟಿ ರಾವ್ ಮತ್ತು ಸುಮಿತ್ರಾ ರಾವ್. ಈ ತಂಡದ ನಿರ್ವಹಣೆ ಶ್ರೀಮತಿ. ಶುಭಶ್ರೀ ಅವರದು.

ಶ್ರೀಮತಿ. ಗಾಯತ್ರಿ ದೇವಿಯವರು ಪುರಂದರ ದಾಸರ ದೇವರ ನಾಮವನ್ನು ಪ್ರಬುದ್ಧ ಭರತನಾಟ್ಯದ ಮೂಲಕ ಅಭಿನಯಿಸಿ ಎಲ್ಲರ ಮೆಚ್ಚುಗೆ ಗಳಿಸಿದರು.







ಬಾಲ್ಯದ ಶಾಲಾ ದಿನಗಳ ತರಲೆ ಪ್ರಸಂಗಗಳನ್ನು ಎಲ್ಲರಿಗೆ ಮರುಕಳಿಸುವಂತೆ ಮಾಡುವಲ್ಲಿ ಯಶಸ್ವಿಯಾದ ಕಿರುನಾಟಕದಲ್ಲಿ ಆಸ್ತಾ ದೇಸಾಯಿ, ಯತಿನ್ ಅಂಗಡಿ, ಹಿತೇಶ್ ಅಂಗಡಿ, ಅನುಷಾ ಶ್ರೀಕಾಂತ ರಾವ್ ಅವರ ನಟನೆ ಎಲ್ಲರ ಮನಸೆಳೆಯಿತು.




ಸಿಡ್ನಿ ಕನ್ನಡ ಸಂಘವು ಪ್ರತೀ ವರ್ಷವೂ ಕನ್ನಡಿಗ ಸಾಮಾಜಿಕ ಕಾರ್ಯಕರ್ತರೊಬ್ಬರನ್ನು ಗುರುತಿಸಿ ಸನ್ಮಾನಿಸುವದು ವಾಡಿಕೆ. ಈ ವರ್ಷದ ಸನ್ಮಾನಕ್ಕೆ ಭಾಜನರಾದವರು ಕನ್ನಡ ಸಂಘ ಮತ್ತು ಕನ್ನಡ ಸಮುದಾಯಕ್ಕೆ ಹಲವಾರು ವರ್ಷಗಳ ಸೇವೆ ಸಲ್ಲಿಸಿದ ಹಿರಿಯ ಸದಸ್ಯ ಡಾ. ಕೇಶವ ಬಸವನಹಳ್ಳಿ ಅವರು. ಡಾ. ಕೇಶವ ಅವರು ಸಿಡ್ನಿ ಕನ್ನಡ ಸಂಘದ ಪ್ರಾರಂಭದ ದಿನಗಳಿಂದ ಈ ವರೆಗೆ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಸಂಘದ ೨೦ನೇ ವಾರ್ಷಿಕೋತ್ಸವದ ಸಮಯದಲ್ಲಿ ಉಪಾಧ್ಯಕ್ಷರಾಗಿದ್ದರು. ಶ್ರೀ ವೆಂಕಟೇಶ್ವರ ಮಂದಿರದಲ್ಲಿ ಆಯೋಜಿಸಿದ್ದ ಬ್ರಹ್ಮೋತ್ಸವ ಸಮಯದಲ್ಲಿ ಕನ್ನಡಿಗರ ಪರವಾಗಿ ಒಂದು ದಿನದ ಸೇವೆಯ ನೇತ್ರತ್ವವನ್ನು ವಹಿಸಿ ಯಶಸ್ವೀಯಾಗಿ ನಿರ್ವಹಿಸಿದ ಹೆಗ್ಗಳಿಕೆ ಇವರದು. ವಿವಿಧ ರೀತಿಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕನ್ನಡಿಗರು ಮತ್ತು ಭಾರತೀಯ ಸಮಾಜದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಡಾ. ಕೇಶವ ಬಸವನಹಳ್ಳಿ ಅವರನ್ನು ಸಿಡ್ನಿ ಕನ್ನಡ ಸಂಘವು ಸಮಸ್ತ ಕನ್ನಡಿಗರ ಪರವಾಗಿ ಗೌರವ ಪೂರ್ವಕವಾಗಿ ಸನ್ಮಾನಿಸಿತು. ಸಂಘದ ಅಧ್ಯಕ್ಷರಾದ ಶ್ರೀ. ಓಂಕಾರಸ್ವಾಮಿಯವರು ಮತ್ತು ಸಂಘದ ಉಪಾಧ್ಯಕ್ಷೆ ಶ್ರೀಮತಿ. ಶಾರದಾ ಕಾರ್ತಿಕ್ ಅವರುಗಳು ಡಾ. ಕೇಶವ ಅವರಿಗೆ ಸ್ಮರಣ ಫಲಕವನ್ನು ನೀಡಿ ಶಾಲು ಹೊದಿಸಿ ಸನ್ಮಾನಿಸಿದರು. ಸಂಘದ ಸಾರ್ವಜನಿಕ ಅಧಿಕಾರಿಗಳಾದ ಶ್ರೀ. ಶ್ಯಾಮ್ ಗೋಪಿನಾಥ್ ಅವರು ಡಾ. ಕೇಶವ ಅವರ ಕಾರ್ಯದ ಸ್ಥೂಲ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು.




ಕನ್ನಡದ ಹಳೆಯ ಚಲನ ಚಿತ್ರಗೀತೆಗಳ "ಗಂಗಾವತರಣ" ಗೀತಮಾಲಿಕೆಯನ್ನು ಶ್ರೀ. ಶಂಕರನಾರಾಯಣ ಮಧ್ಯಸ್ತ ಮತ್ತು ತಂಡದವರು ಪ್ರಸ್ತುತ ಪಡಿಸಿದರು. ಗೀತೆಗಳಿಗೆ ಸೂಕ್ತವಾಗಿ ಹೊಂದಾಣಿಕೆಯಾಗುವಂತೆ ದೃಶ್ಯ ಸಂಯೋಜನೆ ಮಾಡಿದ್ದು ನೆರೆದ ಸಭಿಕರೆಲ್ಲರ ದೀರ್ಘ ಕರತಾಡನದ ಮೆಚ್ಚುಗೆ ಪಡೆಯಿತು. ಶ್ರೀಮತಿ. ಉಷಾ ಸಿದ್ಧಲಿಂಗಾಚಾರ್, ಜಯಂತಿ ಗೌಡ, ನಾಗಭೂಷಣ ಷಣ್ಮುಗಾನಂದ ಅವರುಗಳು ಶ್ರೀ. ಮಧ್ಯಸ್ತ ಅವರೊಂದಿಗೆ ಬಾಗವಹಿಸಿದ್ದರು.

ಕನ್ನಡದ ಕೂಸುಗಳು ಮಕ್ಕಳ ತಂಡದಿಂದ "ರಂಗೀತರಂಗ" ಚಲನಚಿತ್ರದ ಇಂಪಾದ 'ಕರೆಯೋಲೆ' ಗೀತೆಗೆ ಸೊಗಸಾದ ನೃತ್ಯ ಪ್ರದರ್ಶನವನ್ನು ಮಕ್ಕಳಾದ ಅನಿಷಾ ಶೇಷನ್, ದಿಯಾ ಅರಸ್, ಸೃಷ್ಟಿ ರಾವ್ ಮತ್ತು ವಿಭಾ ರವಿ ನೀಡಿದರು.




ಶ್ರೀಮತಿ. ಶ್ರೀದೇವಿ ರಮೇಶ್ ಅವರ ತಂಡವು "ಜಸ್ಟ್ ಮಾತ್ ಮಾತಲ್ಲಿ" ಚಿತ್ರದ ಗೀತೆಗೆ ಮನಮೆಚ್ಚುವ ನೃತ್ಯವನ್ನು ಮಾಡಿ ಸಭಿಕರ ಪ್ರಶಂಶೆಗೆ ಪಾತ್ರರಾದ ತಂಡದ ಸದಸ್ಯರು ಶ್ರೀಮತಿಯರಾದ ಶ್ರೀದೇವಿ ರಮೇಶ್, ಅರ್ಚನಾ ನವೀನ, ಸುಜಾತಾ ಪಟೇಲ್, ವಿದ್ಯಾ ಸುಬ್ರಮಣ್ಯಮ್, ಸೂಚಿತ ಹೆಗಡೆ ಮತ್ತು ಪ್ರಿಯಾಂಕಾ ಕಿಣಿ ಸುಹಾಸ್.

ಚಲಚಿತ್ರ ಗೀತೆಗಳ ತುಣುಕುಗಳ ಗೀತಮಾಲಿಕೆಗೆ ಉತ್ಸಾಹಭರಿತ ನೃತ್ಯವನ್ನು ಮಾಡಿ ಸಿಡ್ನಿ ಕನ್ನಡಿಗರ ಕನ್ನಡತನವನ್ನು ಬಡಿದೆಬ್ಬಿಸುವಲ್ಲಿ ಸಫಲವಾದ ಕಾರ್ಯಕ್ರಮವನ್ನು ಯುವಕ ಯುವತಿಯರು ಪ್ರದರ್ಶಿಸಿದರು. ಈ ನೃತ್ಯ ಕಾರ್ಯಕ್ರಮವು ಈ ವರ್ಷದ ರಾಜ್ಯೋತ್ಸವ ಕಾರ್ಯಕ್ರಮವು ಮೆಚ್ಚುಗೆ ಪಡೆದು ನೆರೆದ ಕನ್ನಡಿಗರ ಅಭಿಮಾನ ಮತ್ತು ಪ್ರಶಂಶೆಗೆ ಪಾತ್ರವಾಯಿತು. ಶ್ರೀಮತಿ. ಭಾವನಾ ಬಿಲ್ಲೂರ್ ಅವರ ನೃತ್ಯ ನಿರ್ದೇಶನದಲ್ಲಿ ಅವರೊಂದಿಗೆ ಹೆಜ್ಜೆ ಹಾಕಿದವರು






ಶ್ರೀಮತಿಯರಾದ ಶೃತಿ ಯಜಮಾನ್, ಬಿಂದು ಪ್ರಿಯದರ್ಶಿನಿ, ಸಹನಾ ರಾಜೇಂದ್ರ, ರೇವಾ ಶಿರೋಳ್, ಸಿಂಧು ಪ್ರಿಯದರ್ಶಿನಿ ಮತ್ತು ಶ್ರೀಯುತರಾದ ನಿರಂಜನ್ ಗಂಗಯ್ಯ, ಗುರು ಯಜಮಾನ್, ನಾಗೇಶ್ ಶರ್ಮಾ, ಬಾಲಾಜಿ ಪ್ರಸಾದ್, ಶ್ರೀಕಾಂತ್ ಸಕ್ಕರೆಪಟ್ಣ ಮತ್ತು ಹರೀಶ್ ಗಂಗಾಧರಪ್ಪ ಅವರುಗಳು. ಕನ್ನಡದ ಅಭಿಮಾನವನ್ನು ಕೆರಳುವಂತೆ ಮಾಡಿದ ಈ ನೃತ್ಯದ ಕೊನೆಯ ಗೀತೆ ದಿ!! ಡಾ. ರಾಜಕುಮಾರ್ ಅವರ ಹಾಡಿದ  ಕನ್ನಡಿಗರೆಲ್ಲರ ಅತ್ಯಂತ ಅಚ್ಚುಮೆಚ್ಚಿನ ಗೀತೆ "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು" ಸಿಡ್ನಿಯ ಕನ್ನಡಿಗರೆಲ್ಲರಿಗೆ ಕನ್ನಡ ನಾಡು, ಭಾಷೆ ಮತ್ತು ಸಂಸ್ಕೃತಿಯ ನೆನಪುಗಳನ್ನು ಮರುಕಳಿಸುವಂತೆ ಮಾಡಿ ಮೈಮನಗಳನ್ನು ಬಡಿದೆಬ್ಬಿಸಿ ಒಂದು ಸುಂದರ ಅನುಭವವನ್ನು ನೀಡುವಲ್ಲಿ ಯಶಸ್ವಿಯಾಯಿತು. "ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು" ಗೀತೆಯು ಕನ್ನಡಿಗರೆಲ್ಲರ ಮೈ ನವಿರೇಳುವಂತೆ ಮಾಡಿ ಎಲ್ಲರ ಮನದಲ್ಲಿ ಕನ್ನಡದ ಡಿಂಡಿಮವನ್ನು ಬಾರಿಸಿತು ಮತ್ತು ಕನ್ನಡದ ರಾಷ್ಟ್ರಕವಿ ಕುವೆಂಪುರವರ "ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಮಾತಿಗೆ ಕನ್ನಡಿ ಹಿಡಿದಂತಿತ್ತು.

ಕಾರ್ಯಕ್ರಮದ ಕೊನೆಯ ಭಾಗದಲ್ಲಿ ಸಿಡ್ನಿಯ ಕನ್ನಡ ಸಮುದಾಯದ ಉದಯೋನ್ಮುಖ ಗಾಯಕರುಗಳಿಗೆ ತಮ್ಮ ಕಲೆಯನ್ನು ವೇದಿಕೆಯ ಮೇಲೆ ಪ್ರದರ್ಶಿಸುವ ಅವಕಾಶವನ್ನು ಒದಗಿಸಲಾಗಿತ್ತು. ತಮ್ಮ ಸುಮಧುರ ಗಾಯನದಿಂದ ಸಭಿಕರ ಮನತಣಿಸಿ ಮೆಚ್ಚುಗೆಗೆ ಪಾತ್ರರಾದವರು ಜ್ಯೋತಿ ಕಿರಣ್, ಶಾಲಿನಿ ಮತ್ತು ಸವಿತಾ ರಾಜು.



ಸವಿತಾ ರಾಜು

ಸಂಘದ ಉಪಾಧ್ಯಕ್ಷೆ ಶ್ರೀಮತಿ. ಶಾರದಾ ಕಾರ್ತಿಕ್ ಅವರು ವಂದನಾರ್ಪಣೆ ಮಾಡಿದರು.

ಸಂಘದ ಕಾರ್ಯಕಾರೀ ಸಮೀತಿಯ ಸದಸ್ಯರಾದ ಶ್ರೀ. ಹರೀಶ್ ಗಂಗಾಧರಪ್ಪ ಅವರು ಕಾರ್ಯಕ್ರಮದ ದಕ್ಷ ನಿರೂಪಣೆಯನ್ನು ನಿರ್ವಹಿಸಿದರು. ರುಚಿರುಚಿಯಾದ ಬಿಸಿಯೂಟವನ್ನು ಆಯೋಜಿಸಿದವರು "ರಾಯಲ್ ಇಂಡಿಯಾ ರೆಸ್ಟೋರೆಂಟ"ನ ಜೇಕಬ್ ಅವರು.



ಶ್ರೀಮತಿ. ಶಾರದಾ ಕಾರ್ತಿಕ್

ವರದಿ: ಹರೀಶ್ ಗಂಗಾಧರಪ್ಪ ಮತ್ತು ವಿಜಯಕುಮಾರ್ ಹಲಗಲಿ



ಶ್ರೀ ಹರೀಶ್ ಗಂಗಾಧರಪ್ಪ



ಶ್ರೀ ವಿಜಯಕುಮಾರ್ ಹಲಗಲಿ



ಸನ್ಮಾನಿತ ಡಾ ಕೇಶವರವರೊಂದಿಗೆ ಸಿಡ್ನಿ ಕನ್ನಡ ಸಂಘದ ಕಾರ್ಯಕಾರಿ ಸಮಿತಿ

# www.kannada.org.au